




# ಕೈಲಾಸ ಮಾನಸ ಸರೋವರ ಯಾತ್ರೆ-2013

**ಪ್ರವಾಸ ದರದಲ್ಲಿ ಬೆಂಗಳೂರಿನಿಂದ ಬೆಂಗಳೂರಿಗೆ ಎಲ್ಲವೂ ಸೇರಿರುತ್ತದೆ.**

11 ದಿನಗಳ ಯಾತ್ರೆ – ಹೆಲಿಕಾಪ್ಟರ್‌ನಲ್ಲಿ

14 ದಿನಗಳ ಯಾತ್ರೆ – ಲ್ಯಾಂಡ್‌ಕ್ರೂಸರ್‌ನಲ್ಲಿ

ಹೊರಡುವ ತಿಂಗಳು : ಮೇ, ಜೂನ್, ಜುಲೈ, ಆಗಸ್ಟ್ 2013

**ಮೊ : 9900080799, 9900080792**



## 6 ದಿನಗಳ ಶ್ರೀಲಂಕಾ ಪ್ರವಾಸ ರಾಮಾಯಣ ಕಾಲದ ಸ್ಥಳ ವೀಕ್ಷಣೆ

ಗಾಯತ್ರಿಪೀಠ, ಟ್ರಿಂಕಾಮಲಿ (54 ಶಕ್ತಿ ಪೀಠದಲ್ಲಿ ಮೊದಲನೆ ಶಕ್ತಿ ಪೀಠ)

ಕೊಲೊಂಬೊ, ನೆಗೆಂಬೊ, ಕ್ಯಾಂಡಿ, ಡಾಂಬುಲಾ, ಸೀತಾ ಅಶೋಕವನ,

ಹನುಮಾನ್ ದೇವಸ್ಥಾನ ಹಾಗೂ ಶ್ರೀಲಂಕಾ ಸಾಂಸ್ಕೃತಿಕ ಕಾರ್ಯಕ್ರಮಗಳು

ಹೊರಡುವ ತಿಂಗಳು : ಫೆಬ್ರವರಿ, ಮಾರ್ಚ್, ಏಪ್ರಿಲ್ – 2013

**ಮೊ : 9880079588 / 9900080795**



## 12 ದಿನಗಳ ಸಿಂಗಾಪುರ – ಮಲೇಶಿಯ-ಥೈಲ್ಯಾಂಡ್ ಪ್ರವಾಸ

ಸಿಂಗಾಪುರ : ಸಿಟಿ ಟೂರ್, ಸೆಂಟೋಸ ಐಲ್ಯಾಂಡ್, ಬರ್ಡ್ ಪಾರ್ಕ್

ಕೌಲಲೊಂಪುರ್ : ಸಿಟಿ ಟೂರ್, ಬಟು ಗುಹೆ, ಪುಟ್ರಾಜಯ

ಥೈಲ್ಯಾಂಡ್ : ಪಟ್ಟಾಯ, ನಂಗ್‌ನಾಚ್ ವಿಲೇಜ್, ಕೋರಲ್ ಐಲ್ಯಾಂಡ್

ಬ್ಯಾಂಕಾಕ್ : ಸಿಟಿ ಟೂರ್, ಸಫಾರಿ ವರ್ಲ್ಡ್, ಮರೀನ್ ಪಾರ್ಕ್

ಹೊರಡುವ ತಿಂಗಳು : ಫೆಬ್ರವರಿ, ಮಾರ್ಚ್, ಏಪ್ರಿಲ್, ಮೇ – 2013

**ಮೊ : 9900080795 / 9900080799**



## 15 ದಿನಗಳ ಗ್ರ್ಯಾಂಡ್ ಯುರೋಪ್ ಪ್ರವಾಸ (9 ದೇಶಗಳು)

ಯು.ಕೆ. ಫ್ರಾನ್ಸ್, ಬೆಲ್ಜಿಯಂ, ನೆದರ್‌ಲ್ಯಾಂಡ್, ಜರ್ಮನಿ,

ಸ್ವಿಟ್ಜರ್‌ಲ್ಯಾಂಡ್, ಆಸ್ಟ್ರೀಯಾ, ಲಿಚೆನ್‌ಟೆನ್‌ಸ್ಟೈನ್, ಇಟಲಿ,

ಹೊರಡುವ ತಿಂಗಳು : ಏಪ್ರಿಲ್, ಮೇ, ಜೂನ್ – 2013

**ಮೊ : 9900080794 / 9900080797**



## 18 ದಿನಗಳ ಚಾರ್‌ಧಾಮ್ ಯಾತ್ರೆ

ಬದರಿನಾಥ್, ಕೇದಾರ್‌ನಾಥ್, ಯಮೋನೋತ್ರಿ, ಗಂಗೋತ್ರಿ

**ಮೊ : 9900080799 / 9880079588**

## Orchid Travel & Tours

Recognised by Department of Tourism Government of Karnataka
Karnataka One State many worlds

# 98, 1st Floor, D.V.G. Road, Basavanagudi, Bangalore - 560 004.

**Tel : 080-26670646, 26621983, 26670647, 26617178**



ಸಂಪಾದಕೀಯ

# ಶ್ರೀರಾಮಕೃಷ್ಣರು ನಮಗೆ ಏಕೆ ಬೇಕು?

**ಹ**ಳೆಯ ಮೌಲ್ಯಗಳು ಕುಸಿದುಬೀಳುತ್ತಿರುವ ಇಂದಿನ ಕಾಲದಲ್ಲಿ ಶ್ರೀರಾಮಕೃಷ್ಣರು ಅದೆಷ್ಟು ಪ್ರಸ್ತುತರಾಗುತ್ತಾರೆ? ಶ್ರೀರಾಮಕೃಷ್ಣರ ಜೀವನ ಮತ್ತು ಸಂದೇಶಗಳು ಇಂದಿನ ನಮ್ಮ ಯಾಂತ್ರಿಕ ಜೀವನದಲ್ಲಿ ಹೇಗೆ ಸಹಾಯಕವಾಗುತ್ತವೆ? ನಮ್ಮ ದಿನನಿತ್ಯದ ಕಷ್ಟಕಾರ್ಪಣ್ಯಗಳಿಗೆ ಶ್ರೀರಾಮಕೃಷ್ಣರ ಪರಿಹಾರ ವೇನು? ಒಟ್ಟಿನಲ್ಲಿ, ನಾವು ಶ್ರೀರಾಮಕೃಷ್ಣರನ್ನು ಏಕೆ ತಾನೇ ಆರಾಧಿಸಬೇಕು?

**೧. ಪಂಥಾತೀತ ಆಧ್ಯಾತ್ಮಿಕತೆ :** ಜಾತಿ–ಮತಗಳ ಕಟ್ಟುಪಾಡು ವಿದ್ಯಾವಂತರಾದ ನಮ್ಮಲ್ಲಿ ಬಹಳಷ್ಟು ಜನಕ್ಕೆ ಸಹ್ಯವಾಗುವುದಿಲ್ಲ. ಆದರೆ ಅವನ್ನು ಮೀರಿದ ಒಂದು ಶಾಶ್ವತ ಮೌಲ್ಯ ಅಥವಾ ತತ್ತ್ವದ ಬೆಳಕು ಬೇಕು. ಅಂತಹ ಆಧ್ಯಾತ್ಮಿಕ ಮೌಲ್ಯವನ್ನು ಶ್ರೀರಾಮಕೃಷ್ಣರು ಪ್ರತಿಪಾದಿಸುತ್ತಾರೆ. ಭಗವಂತನ ಜೊತೆಗಿನ ನೇರ ಬಾಂಧವ್ಯವನ್ನು ಅವರು ಬೋಧಿಸುತ್ತಾರೆ.

**೨. ಮಾನವೀಯ ಅಧ್ಯಾತ್ಮ :** ಅಧ್ಯಾತ್ಮ ದಿನನಿತ್ಯದ ವ್ಯವಹಾರಗಳಿಗೆ ಹೊರತಾಗಿದೆ ಎಂದು ಭಾವಿಸುವವರೇ ಅಧಿಕ. ಹಾಗೆಯೇ ಸಾಮಾನ್ಯ ಮಾನವನ ಕುಂದುಕೊರತೆಗಳಿಗೆ ಅದು ಪರಿಹಾರ ನೀಡದು ಎಂದುಕೊಳ್ಳುವವರೇ ಹೆಚ್ಚು. ಶ್ರೀರಾಮಕೃಷ್ಣರು ಅತ್ಯಂತ ಕನಿಷ್ಠ ದರ್ಜೆಯ ಮನುಷ್ಯನಿಗೂ ಬೇಕಾದ ಅಧ್ಯಾತ್ಮ ವಿದ್ಯೆಯನ್ನು ಬೋಧಿಸುತ್ತಾರೆ. ಅವರು ಬೋಧಿಸುವ ಧರ್ಮವು ಭಯರಹಿತವಾದದ್ದು, ಮೂಢನಂಬಿಕೆಗಳು ಇಲ್ಲದ್ದು, ವೈಜ್ಞಾನಿಕವಾದದ್ದು, ರಹಸ್ಯಗಳಿಂದ ಹೊರತಾದದ್ದು, ಮಾನವೀಯ ಮೌಲ್ಯಗಳ ಬೆಸುಗೆ ಇರುವಂಥದ್ದು. ಹೀಗಾಗಿ ನಮ್ಮ ಇಂದಿನ ಪರಿಸ್ಥಿತಿಗೆ ಅತ್ಯಂತ ಹತ್ತಿರವಾಗಬಲ್ಲದ್ದು.

**೩. ಗೃಹಸ್ಥರ ಮೇಲೆ ಅನುಕಂಪ :** ಇದು ಶ್ರೀರಾಮಕೃಷ್ಣರ ಒಂದು ಹೆಚ್ಚುಗಾರಿಕೆ. "ಭಗವಂತ ಗೃಹಸ್ಥರ ಮೇಲೆ ಹೆಚ್ಚು ಪ್ರೀತಿಯನ್ನು ಹರಿಸುತ್ತಾನೆ. ಗೃಹಸ್ಥರೂ ಭಗವಂತನ ದರ್ಶನ ಮಾಡಿಕೊಳ್ಳಲು ಸಾಧ್ಯ" ಎಂದು ಅವರು ಒತ್ತಿಹೇಳುತ್ತಾರೆ.

**೪. ಪ್ರಾಮಾಣಿಕತೆ ಮತ್ತು ಅಧಿಕೃತತೆ :** ಇಂದಿನ ಜನರು ಸಂಶಯಗ್ರಸ್ತರು. ಯಾವುದನ್ನೂ ಸುಲಭವಾಗಿ ನಂಬುವವರಲ್ಲ. ಧರ್ಮದ ಹೆಸರಿನಲ್ಲಿ ವಂಚನೆಯೇ ಹೆಚ್ಚಾಗುತ್ತಿರುವ ಇಂದಿನ ಕಾಲದಲ್ಲಿ ಇದು ಸಾಮಾನ್ಯ. ಹಾಗಾದರೆ ಶುದ್ಧ ಆಧ್ಯಾತ್ಮಿಕತೆ ದೊರೆವುದೆಲ್ಲಿ? ಈ ಕೊರತೆಯನ್ನು ಶ್ರೀರಾಮಕೃಷ್ಣರು ತುಂಬುತ್ತಾರೆ. ಧರ್ಮ ಮತ್ತು ಅಧ್ಯಾತ್ಮವೆಂಬುದು ಸಪ್ರಾಮಾಣಿಕವಾಗಿ, ಹಾಗೆಯೇ ಅಧಿಕೃತವಾಗಿ ಶ್ರೀರಾಮಕೃಷ್ಣರ ಜೀವನದಲ್ಲಿ ವ್ಯಕ್ತಗೊಂಡಿದೆ; ಅವರ ಉಪದೇಶಗಳಲ್ಲಿ ಪ್ರಕಟಗೊಂಡಿದೆ. "ಸಂಶಯವೆಂಬ ರಾಕ್ಷಸನನ್ನು ನಾಶಮಾಡುವವರು" ಎಂದೇ ಸ್ವಾಮಿ ವಿವೇಕಾನಂದರು ತಮ್ಮ ಗುರುದೇವರನ್ನು ಸ್ತುತಿಸುತ್ತಾರೆ.

**೫. ಸಹಜತೆ, ನಿಷ್ಕಲ್ಮಷತೆ :** ಧರ್ಮದ ಹೆಸರಿನಲ್ಲಿ ಢೋಂಗಿ ಪ್ರದರ್ಶನವನ್ನೇ ಈ ಕಾಲದಲ್ಲಿ ನೋಡುತ್ತೇವೆ. ಶ್ರೀರಾಮಕೃಷ್ಣರ ವ್ಯಕ್ತಿತ್ವ ಇದಕ್ಕೆ ತದ್ವಿರುದ್ಧವಾದುದು. ಭಗವತ್‌ಪ್ರೇಮವೆಂಬುದು ಉಸಿರಾಡುವಂತೆಯೇ, ಸಹಜವಾಗಿ ಅವರಲ್ಲಿ ವ್ಯಕ್ತಗೊಂಡಿದೆ. ಭಗವಂತನ ಸಾನ್ನಿಧ್ಯವೆಂಬುದು ನಡೆದಾಡುವಷ್ಟೇ ಸರಾಗವಾಗಿ ಅವರಲ್ಲಿ ಮೂಡಿಬಂದಿದೆ. ಪ್ರಾಪಂಚಿಕತೆಯ ಸೋಂಕೂ ಇಲ್ಲದ ಅಪ್ಪಟ ಅಧ್ಯಾತ್ಮರತ್ನ ಶ್ರೀರಾಮಕೃಷ್ಣರು.

**೬. ವಿನಯ ಮತ್ತು ತ್ಯಾಗ :** ಇಂದು ಧಾರ್ಮಿಕ ಮುಖಂಡರು ಎನಿಸಿಕೊಂಡವರಲ್ಲಿ ಕಾಣುವುದು ಪ್ರತಿಷ್ಠೆ, ಅಹಂಕಾರಗಳ ಆಟಾಟೋಪ; ಹಣ ಮತ್ತು ವೈಭೋಗದ ಅಸಹ್ಯ ಪ್ರದರ್ಶನ. ಶ್ರೀರಾಮಕೃಷ್ಣರು ಹಣವನ್ನು ಇಟ್ಟುಕೊಳ್ಳುವುದಿರಲಿ, ಒಂದು ನಾಣ್ಯವನ್ನು ಮುಟ್ಟಲೂ ಆಗದ ಸ್ಥಿತಿಯಲ್ಲಿದ್ದವರು; ಎಲ್ಲರಲ್ಲಿನ ಭಗವಂತನನ್ನು ಕಂಡು, ತಾವೇ ಮೊದಲು ಕೈಮುಗಿದವರು; ತಮ್ಮ ಅಂಗಿಯನ್ನು ಸರಿಯಾಗಿ ಹಾಕಿಕೊಳ್ಳಲೂ ಆಗದ